ಹಾಕಿದ; ಪರದೆಗಳನ್ನು ಸರಿಸಿದ; ಹೊರಗಿನಿಂದ ಇರುವೆಯೂ ನುಸುಳಲಾಗದಂತೆ ಭದ್ರಪಡಿಸಿದ. ದೀಪ ಬೆಳಗಿಸಿ, ನಂತರ ಬ್ಯಾಗಿಗೆ ಕೈಹಾಕಿದ. ಏಕೆಂದರೆ, ಅದರೊಳಗಿದ್ದಿದ್ದು ನೋಟಿನ ಕಟ್ಟುಗಳು! ಅವುಗಳನ್ನು ಬ್ಯಾಗ್‌ನಿಂದ ಹೊರತೆಗೆದು ಎಣಿಸತೊಡಗಿದ; ಮುಗಿದಾಗ ರಾತ್ರಿಯ ಸುಮಾರು ಎರಡೂವರೆಯಾಗಿತ್ತು. ಬಹುತೇಕ ಎಲ್ಲವೂ ಎರಡು ಸಾವಿರ ರೂಪಾಯಿಯ ನೋಟುಗಳು. ಬರೋಬ್ಬರಿ ಒಂದು ಕೋಟಿ ರೂಪಾಯಿ!

'ದೇವರಿಗೆ ನನ್ನ ಮೊರೆ ಕೇಳಿಸಿತೇ? ಮಗನನ್ನು ಉಳಿಸಿಕೊಳ್ಳುವುದಕ್ಕೆ ನೆರವು ನೀಡಿದನೇ?' ತನ್ನನ್ನು ತಾನೇ ಪ್ರಶ್ನಿಸಿಕೊಂಡ ಆತ ಹಾಸಿಗೆಯ ಮೇಲೆ ಬಿದ್ದುಕೊಂಡ; ಆದರೆ, ನಿದ್ರೆ ಆತನ ಬಳಿ ಸುಳಿಯಲಿಲ್ಲ. ನೂರಾರು ಯೋಚನೆಗಳು, ಪ್ರಶ್ನೆಗಳು ಆತನನ್ನು ತಿವಿಯತೊಡಗಿದ್ದವು.

'ಆಟೊದಲ್ಲಿ ಪ್ರಯಾಣಿಸಿದ ವ್ಯಕ್ತಿ ನನ್ನನ್ನು ಗುರುತಿಟ್ಟುಕೊಂಡಿರಬಹುದು; ನಾಳೆ ಆತ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿ, ನನ್ನ ಆಟೊ ನಂಬರನ್ನು ಉಲ್ಲೇಖಿಸಿದರೆ, ನಾನು ಈ ಎಲ್ಲಾ ಹಣವನ್ನು ಹಿಂದಿರುಗಿಸಬೇಕಾಗಬಹುದು; ಆ ವ್ಯಕ್ತಿ ತುಂಬಾ ಗಾಬರಿಗೊಂಡಂತೆ ಇದ್ದ; ಒಂದು ವೇಳೆ ಇವು ನಕಲಿ ನೋಟಾಗಿರಬಹುದೇ? ಯಾರಾದರೂ ನೋಟು ತುಂಬಿದ ಬ್ಯಾಗನ್ನು ಈ ರೀತಿಯಲ್ಲಿ ಮರೆತು ಹೋಗುತ್ತಾರೆಯೇ?'

ಅವು ನಕಲಿಯಾಗಿರಬಹುದು ಎನ್ನುವ ಅನುಮಾನ ಬಲವಾಯಿತು. ಆತ ಎದ್ದು, ಬ್ಯಾಗ್‌ನಿಂದ ಒಂದು ನೋಟನ್ನು ತೆಗೆದು ಕಿಸೆಗೆ ಹಾಕಿಕೊಂಡ ಮತ್ತು ಬ್ಯಾಗನ್ನು ಅಲಮಾರಿನಲ್ಲಿ ಭದ್ರವಾಗಿರಿಸಿ, ಬೀಗ ಜಡಿದ. ಆತನನ್ನು ನಿದ್ರೆ ಆವರಿಸಿಕೊಳ್ಳುವುದರೊಳಗಾಗಿ ಬೆಳಗಾಗಿತ್ತು. ಎದ್ದ ಕೂಡಲೇ ಆತ ಕಿಸೆಯಲ್ಲಿದ್ದ ನೋಟನ್ನು ತನ್ನದೇ ಆದ ರೀತಿಯಲ್ಲಿ, ತನ್ನೆಲ್ಲಾ ಅನುಭವಗಳನ್ನು ಒರೆಗೆ ಹಚ್ಚಿ ಸೂಕ್ಷ್ಮವಾಗಿ ಪರೀಕ್ಷಿಸಿದ. ಅದು ನಕಲಿಯಂತೆ ಕಂಡುಬರಲಿಲ್ಲ. ನಿತ್ಯಕರ್ಮಗಳನ್ನು ಮುಗಿಸಿದ ನಂತರ ಆತ ಸಮೀಪದ ಅಂಗಡಿಗೆ ಹೋಗಿ ಒಂದಿಷ್ಟು ಮನೆಬಳಕೆಯ ವಸ್ತುಗಳನ್ನು ಖರೀದಿಸಿ, ಅಂಗಡಿಯವನಿಗೆ ಎರಡು ಸಾವಿರದ ಆ ನೋಟನ್ನು ನೀಡಿದ; ಅಂಗಡಿಯವನು ನೋಟನ್ನು ಪರೀಕ್ಷಿಸುವಾಗ ಅಮನ್ ಆತನ ಮುಖವನ್ನೇ ಸೂಕ್ಷ್ಮವಾಗಿ ಗಮನಿಸುತ್ತಿದ್ದ. ಅಂಗಡಿಯವನು ಬಾಕಿ ಹಣವನ್ನು ನೀಡಿದಾಗಲೇ, ಅದು ಅಸಲಿ ಎನ್ನುವುದು ಆತನಿಗೆ ಖಾತರಿಯಾಗಿದ್ದು.

ಮನೆಗೆ ಬಂದು, ಸಾಮಾನುಗಳನ್ನೆಲ್ಲ ಒಳಗೆ ಇರಿಸಿ, ಆಟೊ ಮಾಲೀಕನ ಮನೆಗೆ ಹೋಗಿ ಹಿಂದಿನ ದಿನದ ಲೆಕ್ಕಾಚಾರ ಮುಗಿಸಿಕೊಂಡು, ನೇರವಾಗಿ ಮಗನನ್ನು ದಾಖಲುಮಾಡಿದ್ದ ಆಸ್ಪತ್ರೆಗೆ ಧಾವಿಸಿದ. ಮಗನ ಆರೋಗ್ಯದ ಬಗ್ಗೆ ಪತ್ನಿಯ ಬಳಿ ವಿಚಾರಿಸಿದಾಗ, ಆಕೆ ಉತ್ತರಿಸುವ ಬದಲಿಗೆ ಜೋರಾಗಿ ಅಳತೊಡಗಿದಳು. 'ಆಗಬಾರದ್ದೇನಾದರೂ ಆಗಿಹೋಯಿತೇ?' ಗಾಬರಿಯಾದರೂ ಹತಾಶನಾಗಲಿಲ್ಲ. ದೇವರ ಮೇಲಿನ ನಂಬಿಕೆ ಆತನಲ್ಲಿ ಹಿಂದಿನ ರಾತ್ರಿಯಿಂದ ಬಲವಾಗಿತ್ತು. ನಂತರ ತಿಳಿಯಿತು, ಮಗನ ಆರೋಗ್ಯ ಇನ್ನಷ್ಟು ಹದಗೆಡುತ್ತಿದೆಯೆಂದು ವೈದ್ಯರು ಆತನ ಪತ್ನಿಗೆ ಹೇಳಿದ್ದರು.

''ಹೆದರಬೇಡ, ಈ ದಿನ ಸಂಜೆ ಮುಂಬೈನಿಂದ ದೊಡ್ಡ ಡಾಕ್ಟರ್ ಬರ್ತಾರಂತೆ. ಅವರು ಹೇಳಿದಂತೆ ಮಾಡಬೇಕು. ಒಂದು ವೇಳೆ ಮುಂಬೈಗೇ ಕರೆದುಕೊಂಡು ಹೋಗಬೇಕು ಎಂದು ಅವರು ಹೇಳಿದರೆ, ಹೋಗೋಣ. ನನಗೆ ಮಗನಿಗಿಂತ ಹೆಚ್ಚು ಇನ್ನೇನೂ ಇಲ್ಲ. ತಾಳ್ಮೆ ಕಳೆದುಕೊಳ್ಳಬೇಡ; ದೇವರಿದ್ದಾನೆ.'' ಕೊನೆಯ ಪದವನ್ನು ಸ್ವಲ್ಪ ಒತ್ತಿ ಹೇಳಿ, ಪತ್ನಿಯನ್ನು ಸಂತೈಸಿ, ಆಕೆಗೆ ತುರ್ತು ಅಗತ್ಯದ ವಸ್ತುಗಳನ್ನು, ಔಷಧಿಗಳನ್ನು, ತಿಂಡಿಯನ್ನು ತಂದುಕೊಟ್ಟು, ಪ್ರಯಾಣಿಕರನ್ನು ಅರಸುತ್ತ ರಸ್ತೆಗಿಳಿದ. ಸ್ವಲ್ಪ ದೂರದಲ್ಲಿರುವ ಒಂದು ಚಹಾ ಅಂಗಡಿಯ ಮುಂದೆ ಆಟೊ ನಿಲ್ಲಿಸಿದ. ಅಲ್ಲಿ ಆತನ ಕೆಲವು ವೃತ್ತಿ ಸ್ನೇಹಿತರು ಆಟೊ ನಿಲ್ಲಿಸಿಕೊಂಡು ಚಹಾ ಕುಡಿಯುತ್ತಿದ್ದರು. ಅದು ಅವರ ಅಡ್ಡಾ. ಪ್ರತಿ ನಿತ್ಯ ಅವರು ಅಲ್ಲಿ ಸೇರುತ್ತಾರೆ, ನಿರ್ದಿಷ್ಟ ಸಮಯದಲ್ಲಿ.